ಒಪ್ಪುತ್ತವೆ. ಆದರೆ ಯಾಕೆ ಅಪೇಕ್ಷಿತ ಬದಲಾವಣೆಗಳು ಸಾಧ್ಯವಾಗುವುದಿಲ್ಲ? ಈ ಪ್ರಶ್ನೆಗೆ, ಎಂ. ಉಷಾ ಸಂಪಾದಿಸಿರುವ 'ಹೆಣ್ಣೆಂಬ ಶಬುದ' (ಹೆಣ್ಣನ್ನು ಕುರಿತ ಆಧುನಿಕ ಕವಿತೆಗಳ ಮಂಜರಿ) ಸ್ಥೂಲವಾದ ಉತ್ತರದಂತಿದೆ. ಇದೇ ಉತ್ತರ ಎಂದು ಪರೀಕ್ಷೆಯಲ್ಲಿನ ಪ್ರಶ್ನೆಗೆ ಉತ್ತರ ಕೊಡುವಂತೆ ಉತ್ತರವಿಲ್ಲ. ಹಾಗೆ ಇರಬೇಕಾಗಿಯೂ ಇಲ್ಲ, ಇರಲು ಸಾಧ್ಯವೂ ಇಲ್ಲ. ಸಾಧ್ಯವಿರುವ ಹಲವು ಉತ್ತರಗಳ ಝಲಕ್‌ಗಳನ್ನು ಈ ಮಂಜರಿಯಲ್ಲಿ ಗುರುತಿಸಬಹುದು.

ಈ ಕೃತಿಗೊಂದು ಅಧ್ಯಯನಶೀಲವಾದ ಪ್ರಸ್ತಾವನೆಯನ್ನು ಉಷಾ ಅವರು ಬರೆದಿದ್ದಾರೆ. ಲೇಖಕಿಯಾಗಿ ಮತ್ತು ಕಾವ್ಯದ 'ವಸ್ತು'ವಾಗಿ ಹೆಣ್ಣನ್ನು ಸ್ವತಃ ಹೆಣ್ಣು ಹೇಗೆ ಕಟ್ಟಿಕೊಂಡಿದ್ದಾಳೆ ಮತ್ತು 'ವಸ್ತು'ವಾಗಿ ಅದರ ಚಹರೆಗಳು ಯಾವುವು ಎನ್ನುವುದನ್ನು ಗುರುತಿಸಿದ್ದಾರೆ. ಗಂಡಾಳಿಕೆಗೆ ತುತ್ತಾದ 'ವಸ್ತು'ವಾಗಿ ಅವಳ ನಿಜ ಸ್ವರೂಪ ಕಾಣದಿರುವಂತೆಯೇ ಗಂಡಾಳಿಕೆಯ ಬಲಿಪಶುವಾದ ಹೆಣ್ಣಿಗೂ ಈ ಮಿತಿ ಒದಗಿರುವುದನ್ನು ಅವರು ಇಲ್ಲಿ ಚರ್ಚಿಸಿದ್ದಾರೆ.

ಇಲ್ಲಿನ ಕವಿತೆಗಳ ಆಯ್ಕೆಗೆ ಈ ಸಂಕಲನದ ಆಶಯವೇ ಮಾನದಂಡವಾಗಿರುವುದರಿಂದ ಕೆಲವು ಕವಿತೆಗಳು ಇಲ್ಲಿ ಅನಿವಾರ್ಯವಾಗಿ ಜಾಗ ಪಡೆದಿವೆ. ಮತ್ತೆ ಕೆಲವು, ಈ ತನಕ ನಾವು ಗಂಭೀರವಾಗಿ ಪರಿಗಣಿಸದೇ ಇದ್ದ ಕವಿತೆಗಳು ಇಲ್ಲಿ ಜಾಗ ಪಡೆದು ನಮ್ಮನ್ನು ಚಕಿತಗೊಳಿಸುತ್ತವೆ. ಕೆಲವು ಕವಿತೆಗಳನ್ನು ಕುರಿತ ನಮ್ಮ ನಿಲುವುಗಳೇ ಬದಲಾಗುವಷ್ಟು ಅವು ನಮ್ಮನ್ನು ಸೆಳೆಯುತ್ತವೆ. ಉದಾಹರಣೆಗೆ ಸಿದ್ಧಯ್ಯ ಪುರಾಣಿಕರ ಕವಿತೆ.

(ಪಂಜೆಯವರ ಬಹುಚರ್ಚಿತ 'ಡೊಂಬರ ಚೆನ್ನೆ' ಅದರ ಭಾವುಕ ನೆಲೆಯನ್ನು ಧಿಕ್ಕರಿಸಿ ಇವತ್ತು ನಮಗೆ ಪ್ರಿಯವಾಗುವುದು ಹೆಣ್ಣಿನ ಆಸ್ತಿಯ ಹಕ್ಕನ್ನು ಅನುಮೋದಿಸುತ್ತದೆ ಎನ್ನುವ ಕಾರಣಕ್ಕೆ. ಹೆಣ್ಣಿನ ದೇಹವೇ ಮೂಲವಾದ ಅರಸನ ಬಯಕೆಯು ಅವಳ ಅರಸು ಮನೆತನದ ಹಕ್ಕನ್ನು ಅವಳಿಗೆ ನೀಡುವುದರೊಂದಿಗೆ ಮುಕ್ತಾಯವಾಗುತ್ತದೆ.)

ನವೋದಯ, ನವ್ಯ, ಬಂಡಾಯ, ಬಂಡಾಯೋತ್ತರ – ಹೀಗೆ ಹಲವು ತಾತ್ವಿಕ




**ಹೆಣ್ಣೆಂಬ ಶಬುದ**
ಸಂ: ಡಾ. ಎಂ. ಉಷಾ
ಪು: 340; ಬೆ: 200
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ,
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು—02.